ಮುಖ್ಯ ಪೋಷಕರು

**ಪ್ರೊ. ಜಯಶೀಲ**

ಕುಲಪತಿಗಳು, ತುಮಕೂರು ವಿಶ್ವವಿದ್ಯಾನಿಲಯ.

**ಪ್ರೊ. ಬಿ.ಎಸ್.ಗುಂಜಾಳ**

ಕುಲಸಚಿವರು, ತುಮಕೂರು ವಿಶ್ವವಿದ್ಯಾನಿಲಯ.

**ಡಾ. ಡಿ.ವಿ.ಪರಮಶಿವಮೂರ್ತಿ**

ಕುಲಸಚಿವರು (ಮೌಲ್ಯಮಾಪನ), ತುಮಕೂರು ವಿಶ್ವವಿದ್ಯಾನಿಲಯ.

ಪೋಷಕರು

**ಡಾ. ಈಶ್ವರ ಎಚ್.ವೈ.**

ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು.

ಸಂಘಟನಾ ಕಾರ್ಯದರ್ಶಿ

**ಡಾ. ಗೀತಾ ವಸಂತ**

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ,
ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು.
ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
ದೂರವಾಣಿ : 96633 71013
ಮಿಂಚಂಚೆ : geetavasant@gmail.com

ಆಯೋಜನಾ ಸಮಿತಿ

**ಡಾ. ಶಿವಣ್ಣ ತಿಮ್ಲಾಪುರ**

**ಶ್ರೀಮತಿ ಆಶಾರಾಣಿ ಕೆ.**

**ಡಾ. ಧರ್ಮವೀರ ಕೆ.ಹೆಚ್.**

**ಶ್ರೀ ಕೃಷ್ಣೇಗೌಡ ಟಿ.ಎಸ್.**

# ತುಮಕೂರು ವಿಶ್ವವಿದ್ಯಾನಿಲಯ

## ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು

(ನ್ಯಾಕ್ 'ಎ' ಮಾನ್ಯತೆ ಪಡೆದಿದೆ)

## ಕನ್ನಡ ವಿಭಾಗ

ಒಂದು ದಿನದ ರಾಷ್ಟ್ರೀಯ ಸಮ್ಮೇಳನ

# ಆಧುನಿಕ ಕನ್ನಡ ಸಾಹಿತ್ಯದಲ್ಲಿ ಅಲಕ್ಷಿತ ಲೋಕದ ಸಂಕಥನ

## (ದೃಷ್ಟಿ, ಧ್ವನಿ ಮತ್ತು ಲೋಕಮೀಮಾಂಸೆ)

**05 ಮಾರ್ಚ್ 2018**

ಸರ್ ಎಂ.ವಿಶ್ವೇಶ್ವರಯ್ಯ ಸಭಾಂಗಣ

ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು ವಿಶ್ವವಿದ್ಯಾನಿಲಯ,

ಬಿ.ಹೆಚ್.ರಸ್ತೆ, ತುಮಕೂರು – 572 103.

## ಸರ್ವರಿಗೂ ಆದರದ ಸುಸ್ವಾಗತ

## ತುಮಕೂರು ವಿಶ್ವವಿದ್ಯಾನಿಲಯ

ತುಮಕೂರು ವಿಶ್ವವಿದ್ಯಾನಿಲಯವು ಕರ್ನಾಟಕ ಸರ್ಕಾರದಿಂದ 2004ರಲ್ಲಿ ಸ್ಥಾಪನೆಗೊಂಡಿದೆ. ವಿಶ್ವವಿದ್ಯಾಲಯ ಧನಸಹಾಯ ಆಯೋಗದಿಂದ ಸೆಕ್ಷನ್ 2 (f)ನ ಅಡಿಯಲ್ಲಿ ಮಾನ್ಯತೆ ಪಡೆದಿದ್ದು, 12 'ಬಿ' ಸ್ಥಾನವನ್ನು ಪಡೆದಿದೆ. ಆರಂಭವಾದ ಅಲ್ಪ ಅವಧಿಯಲ್ಲಿಯೇ ತನ್ನ ಶೈಕ್ಷಣಿಕ ಬೆಳವಣಿಗೆಯನ್ನು ದಾಖಲಿಸುತ್ತಿರುವ ತುಮಕೂರು ವಿಶ್ವವಿದ್ಯಾಲಯವು ಬೆಂಗಳೂರು–ಹೊನ್ನಾವರ ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲಿಯೇ ತಲೆಯೆತ್ತಿದೆ.

## ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು – ಕನ್ನಡ ವಿಭಾಗ

1940ರಲ್ಲಿ ಸ್ಥಾಪನೆಯಾದ ಸರ್ಕಾರಿ ಕಲಾ ಮತ್ತು ವಿಜ್ಞಾನ ಕಾಲೇಜು ಈಗ ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಅಂತರ್ಗತವಾಗಿದೆ. ಆರಂಭದಿಂದಲೂ ರಾಜ್ಯದ ಪ್ರತಿಷ್ಠಿತ ಕಾಲೇಜುಗಳಲ್ಲಿ ಒಂದೆಂದು ತನ್ನ ಶೈಕ್ಷಣಿಕ ಗುಣಮಟ್ಟದಿಂದ ಗುರುತಿಸಿಕೊಂಡಿದ್ದ ಈ ಕಾಲೇಜು ಈಗ ವಿಶ್ವವಿದ್ಯಾನಿಲಯದ ಭಾಗವಾಗಿ ತನ್ನ ಶೈಕ್ಷಣಿಕ ವಲಯವನ್ನು ವಿಸ್ತರಿಸಿಕೊಳ್ಳುತ್ತಲಿದೆ. ಸದ್ಯ 13 ವಿಭಾಗಗಳು ಕಾಲೇಜಿನಲ್ಲಿದ್ದು, ಬೋಧನೆ, ಸಂಶೋಧನೆಗಳಲ್ಲಿ ಕ್ರಿಯಾಶೀಲವಾಗಿವೆ. ನ್ಯಾಕ್ 'ಎ' ಗ್ರೇಡ್ ಪಡೆದಿದ್ದು, ಯು.ಜಿ.ಸಿ. ಯಿಂದ 'ಕಾಲೇಜ್ ವಿತ್ ಪೊಟೆನ್ಶಿಯಲ್ ಫಾರ್ ಎಕ್ಸಲೆನ್ಸ್' ಯೋಜನೆಯಡಿ ಗುರುತಿಸಲ್ಪಟ್ಟ ಹೆಮ್ಮೆಯ ಸಂಸ್ಥೆಯಾಗಿದೆ. ಭಾಷೆಯೊಟ್ಟಿಗೆ ಬೌದ್ಧಿಕತೆ, ಸಂಸ್ಕೃತಿಯೊಟ್ಟಿಗೆ ಸೃಜನಶೀಲತೆಯನ್ನು ಬೆಸೆದು ಅರಿವಿನ ಪರಿಧಿಗಳನ್ನು ವಿಸ್ತರಿಸುವ ಸಂಕಲ್ಪದಿಂದ ಇಲ್ಲಿನ ಕನ್ನಡ ವಿಭಾಗವು ಕೆಲಸ ಮಾಡುತ್ತಿದೆ.

## ಸಮ್ಮೇಳನದ ಕುರಿತು

ಇಲ್ಲಿ ಯಾರೂ ಮುಖ್ಯರಲ್ಲ ಯಾರೂ ಅಮುಖ್ಯರಲ್ಲ ಯಾವುದೂ ಯಃಕಶ್ಚಿತವಲ್ಲ ಎಂಬ ಕುವೆಂಪು ಅವರ ಮಾತು 20ನೆಯ ಶತಮಾನದ ಕನ್ನಡ ಚಿಂತನಾವಲಯವನ್ನು ಹಾಗೂ ಸಾಹಿತ್ಯ ಸಂವೇದನೆಯನ್ನು ವಿಸ್ತರಿಸಿದ ಬೀಜವಾಕ್ಯಗಳಲ್ಲಿ ಒಂದು. ಕನ್ನಡದ ಪ್ರಜ್ಞೆಯು ಇಂತಹ ಘನವಾದ ದೃಷ್ಟಿಯನ್ನು ಪಂಪನಲ್ಲಿಯೇ ಸಾಕ್ಷೀಕರಿಸಿಕೊಂಡಿದೆ. ಮುಂದೆ ವಚನಕಾರರಲ್ಲಿ ಉಜ್ವಲವಾಗಿ ಬೆಳಗಿದೆ. ತತ್ವಪದಕಾರರ ಮೂಲಕ ಮೂಲೆ ಮೂಲೆಗೂ ಹರಡಿದೆ. 20ನೆಯ ಶತಮಾನದಲ್ಲಿ ಅದು ಜಾಗತಿಕ ಚಿಂತನೆಗಳ ಸಾಹಚರ್ಯದೊಂದಿಗೆ ಬಲಗೊಂಡಿದೆ. ಯಾರೂ ಅಮುಖ್ಯರಲ್ಲ ಎಂಬುದು ರಾಜಕೀಯ ಪ್ರಜ್ಞೆಯಿಂದ ಹೊಮ್ಮಿದ ಮಾತು ಹೇಗೋ ಹಾಗೆಯೇ ಅದು ಅಧ್ಯಾತ್ಮಿಕ ವಿಕಾಸದ ಧ್ವನಿಯೂ ಹೌದು ಎಂಬುದನ್ನು ಮರೆಯುವಂತಿಲ್ಲ.

ಕನ್ನಡದಲ್ಲಿ 70ರ ದಶಕದಾಚೆ ಪ್ರಧಾನ–ಅಧೀನ, ಮುಖ್ಯ–ಉಪ ಎಂಬ ಪರಿಕಲ್ಪನೆಗಳಲ್ಲಿ ಸಂಸ್ಕೃತಿ ಅಧ್ಯಯನಗಳು ನಡೆದವು. ಇದುವರೆಗೂ ಅಂಚಿಗೆ ತಳ್ಳಲ್ಪಟ್ಟ ಲೋಕವೊಂದು ಮೈಮುರಿದು ಎದ್ದುನಿಲ್ಲಲು ಸಾಮಾಜಿಕ ಚಳವಳಿಗಳು ಕಾರಣವಾದವು. ಆಧುನಿಕೋತ್ತರ ಚಿಂತನೆಗಳು ಕೇಂದ್ರ ಮತ್ತು ಅಂಚು ಎಂಬ ಪರಿಕಲ್ಪನೆಯನ್ನೇ ಬಯಲುಗೊಳಿಸಿ ನಮ್ಮ ಅಧ್ಯಯನಗಳು ಭಿನ್ನ ಅರ್ಥೈಸುವಿಕೆಗೆ, ಪುನರ್ ವ್ಯಾಖ್ಯಾನಕ್ಕೆ ಒಳಗಾಗಬೇಕೆಂಬ ಹೊಳಹು ನೀಡಿದವು. 'ಪ್ರಧಾನ', 'ಮುಖ್ಯ'ವೆಂಬ ಮೊಹರು ಹೊತ್ತ ಕಲ್ಪಿತ ವಾಸ್ತವವನ್ನು ನಿರಾಕರಿಸದೇ ಹೊಸದನ್ನು ಕಾಣಲು ಸಾಧ್ಯವಿಲ್ಲ. ಸಮಗ್ರವಾದುದನ್ನು ಕಟ್ಟಲು ಸಾಧ್ಯವಿಲ್ಲ. ದಲಿತರು, ಅಲ್ಪಸಂಖ್ಯಾತರು, ಅಲೆಮಾರಿಗಳು, ಮಹಿಳೆಯರು, ಲೈಂಗಿಕ ಅಲ್ಪಸಂಖ್ಯಾತರು, ಲಿಂಗಪರಿವರ್ತಿತರು ಇವರೆಲ್ಲರ ಲೋಕದೃಷ್ಟಿಯನ್ನು ಅಲಕ್ಷಿಸಿದ ನಮ್ಮ ಗ್ರಹಿಕೆಗಳು ಅಪೂರ್ಣ. 'ಮುಖ್ಯ'ವೆಂಬುದೇ ಜ್ಞಾನವೆಂದು ಬಿಂಬಿಸುತ್ತ ಹೋದಾಗ, ಜ್ಞಾನವು ಅಧಿಕಾರವಾಗುತ್ತದೆ. ಹಿಂಸೆಯಾಗುತ್ತದೆ. ಆದ್ದರಿಂದ ಈ ಅಲಕ್ಷಿತ ಲೋಕಗಳ ಸಂಕಥನವನ್ನು ಕಟ್ಟುವುದು ಅಗತ್ಯ. ಇಲ್ಲಿ ಜೀವಪರವಾದ ಲೋಕಮೀಮಾಂಸೆಯೊಂದು ಹುಟ್ಟಲು ಸಾಧ್ಯವೆ ? ಎಂಬ ಪ್ರಶ್ನೆ ಹಾಗೂ ಸಾಧ್ಯ ಎಂಬ ನಂಬಿಕೆಗಳನ್ನು ಹೊತ್ತು, ಪ್ರಸ್ತುತ ರಾಷ್ಟ್ರೀಯ ಸಮ್ಮೇಳನವನ್ನು ಆಯೋಜಿಸಲಾಗುತ್ತಿದೆ. ಅವರು ಲೋಕವನ್ನು ಅರಿಯುವ, ಭಾವಿಸುವ, ಕಟ್ಟುವ ದೃಷ್ಟಿಯನ್ನು ಕಾಣುವ, ದನಿಗಳನ್ನು ಆಲಿಸುವ, ಆ ಮೂಲಕ ಲೋಕಮೀಮಾಂಸೆ ಯೊಂದನ್ನು ಕಟ್ಟುವ ಉದ್ದೇಶ ಸಮ್ಮೇಳನದ್ದು.

## ಚರ್ಚಿಸಲ್ಪಡುವ ಪರಿಕಲ್ಪನೆಗಳು (ಆಧುನಿಕ ಕನ್ನಡ ಸಾಹಿತ್ಯವನ್ನು ಆಧರಿಸಿ)

* ದಲಿತ ಲೋಕಮೀಮಾಂಸೆ – ಸಂಸ್ಕೃತಿ ಕಥನಗಳು
* ಚಳವಳಿಗಳ ತಾತ್ವಿಕತೆ – ರಾಜಕೀಯ ಪ್ರಜ್ಞೆಯ ಅನಾವರಣ
* ಹೆಣ್ಣು : ಜೈವಿಕತೆ–ತಾಯ್ತನ ನೀಡಿದ ಲೋಕಮೀಮಾಂಸೆ
* ಮಹಿಳೆ : ಅಧಿಕಾರ ಕೇಂದ್ರದ ನಿರಚನೆ
* ಅಲ್ಪಸಂಖ್ಯಾತರ ಅನುಭವ ಲೋಕ – ಹೊಸ ಸಂವೇದನೆ
* ತೃತೀಯ ಲಿಂಗಿಗಳ ಸಂವೇದನೆ – ಸುಪ್ತ ಧ್ವನಿಯ ಸ್ಫೋಟ
* ಶ್ರಮಿಕ ಲೋಕದ ಒಳದೃಷ್ಟಿ : ಶ್ರಮ – ಕೌಶಲ್ಯ – ಜ್ಞಾನ : ಮರುವ್ಯಾಖ್ಯಾನ
* ದಮನಿತ ಲೋಕದ ಅಂತಃಶಕ್ತಿ – ಭಿನ್ನ ಧಾರೆಗಳು, ಭಿನ್ನ ರೂಪಗಳು
* ಅಲಕ್ಷಿತ ಆಧ್ಯಾತ್ಮಿಕ ಧಾರೆಗಳು – ಸಾಧನ ಪಂಥಗಳು

## ಪ್ರಬಂಧ ಮಂಡಿಸಲು ಆಹ್ವಾನ :

ಮೇಲಿನ ಪರಿಕಲ್ಪನೆಗಳನ್ನು ಆಧರಿಸಿದ ಸಂಶೋಧನಾ ಪ್ರಬಂಧಗಳನ್ನು ಆಹ್ವಾನಿಸುತ್ತೇವೆ, ಅಧ್ಯಾಪಕರು ಹಾಗೂ ಸಂಶೋಧನಾ ವಿದ್ಯಾರ್ಥಿಗಳು ಪ್ರಬಂಧವನ್ನು ಪೂರ್ಣರೂಪದಲ್ಲಿ (1500 ಪದಗಳಿಗೆ ಮೀರದಂತೆ) ಸಲ್ಲಿಸಲು ಕೋರುತ್ತೇವೆ. ಆಯ್ಕೆಯಾದ ಪ್ರಬಂಧಗಳನ್ನು ಪ್ರೊಸೀಡಿಂಗ್ಸ್‌ನಲ್ಲಿ ಪ್ರಕಟಿಸಲಾಗುವುದು. ಪ್ರಬಂಧವು ನುಡಿ ತಂತ್ರಾಂಶದಲ್ಲಿ, 12 ಫಾಂಟ್ ಅಳತೆ ಹಾಗೂ 1.5 ಲೈನ್ ಸ್ಪೇಸಿಂಗ್‌ನಲ್ಲಿ ಇರಬೇಕು. ಪೂರ್ಣಸ್ವರೂಪದ ಪ್ರಬಂಧವನ್ನು geetavasant@gmail.com ಈ ಮಿಂಚಂಚೆಗೆ ಫೆಬ್ರವರಿ 10ರ ಒಳಗಾಗಿ ಸಲ್ಲಿಸಬೇಕು.

**ನೋಂದಾಯಿಸಿಕೊಳ್ಳಲು ಅಂತಿಮ ದಿನಾಂಕ : 10–02–2018**

| | | |
|---|---|---|
| ಶುಲ್ಕ | ಅಧ್ಯಾಪಕರಿಗೆ | ರೂ : 500 |
| | ಸಂಶೋಧಕರಿಗೆ | ರೂ : 300 |
| | ವಿದ್ಯಾರ್ಥಿಗಳಿಗೆ | ರೂ : 150 |

ಡಿಡಿಯನ್ನು : ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು ವಿ.ವಿ. ಇವರ ಹೆಸರಿನಲ್ಲಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ : 96633 71013, 95915 13572

# ತುಮಕೂರು ವಿಶ್ವವಿದ್ಯಾನಿಲಯ

## ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು

(ನ್ಯಾಕ್ 'ಎ' ಮಾನ್ಯತೆ ಪಡೆದಿದೆ)

## ಕನ್ನಡ ವಿಭಾಗ

ಒಂದು ದಿನದ ರಾಷ್ಟ್ರೀಯ ಸಮ್ಮೇಳನ

# ಆಧುನಿಕ ಕನ್ನಡ ಸಾಹಿತ್ಯದಲ್ಲಿ ಅಲಕ್ಷಿತ ಲೋಕದ ಸಂಕಥನ

## (ದೃಷ್ಟಿ, ಧ್ವನಿ ಮತ್ತು ಲೋಕಮೀಮಾಂಸೆ)

**05 ಮಾರ್ಚ್ 2018**

**ಸರ್ ಎಂ.ವಿಶ್ವೇಶ್ವರಯ್ಯ ಸಭಾಂಗಣ**

**ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು ವಿಶ್ವವಿದ್ಯಾನಿಲಯ,**

**ಬಿ.ಹೆಚ್.ರಸ್ತೆ, ತುಮಕೂರು – 572 103.**

ಶ್ರೀಮತಿ/ಶ್ರೀ ..........................................................................

..........................................................................

......................................................

## “ಆಧುನಿಕ ಕನ್ನಡ ಸಾಹಿತ್ಯದಲ್ಲಿ ಅಲಕ್ಷಿತ ಲೋಕದ ಸಂಕಥನ” ಒಂದು ದಿನದ ರಾಷ್ಟ್ರೀಯ ಸಮಾವೇಶಕ್ಕೆ

# ನೊಂದಣಿ ನಮೂನೆ

ಹೆಸರು :

ಹುದ್ದೆ :

ವಿಳಾಸ :

ದೂರವಾಣಿ ಸಂಖ್ಯೆ :

ಇಮೇಲ್ :

ನೊಂದಣಿ ದಿನಾಂಕ :

ನೊಂದಣಿ ಶುಲ್ಕ :

ಡಿ.ಡಿ ಸಂಖ್ಯೆ :

ಬ್ಯಾಂಕ್ ವಿವರ :

ಪ್ರಬಂಧದ ಶೀರ್ಷಿಕೆ :

(ಡಿ.ಡಿಯೊಂದಿಗೆ ನೊಂದಣಿ ನಮೂನೆಯನ್ನು ಭರ್ತಿಮಾಡಿ ಕಳುಹಿಸುವುದು)